## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**-180/2023 **DW**-1

**ದಿಃ 13.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಜೆ ಪಿ ಡಿ ವಕೀಲರಿಂದಃ**

**6.** ಸಿಟಿಎಸ್ ನಂಃ2672/ಬಿ ತಮ್ಮ ಮಗ ಅರುಣನ ಹೆಸರಿನಲ್ಲಿ ಅಂದರೆ ವಾದಿ ಹೆಸರಿನಲ್ಲಿದೆ ಎಂದರೆ ಸರಿ. ಅದರಲ್ಲಿ ಎರಡು ವಾಣಿಜ್ಯ ಅಂಗಡಿಗಳು ಇವೆ ಎಂದರೆ ಸರಿ. ಸಿಟಿಎಸ್ ನಂಃ2671/1 ರಲ್ಲಿ ನಾಲ್ಕು ವಾಣಿಜ್ಯ ಅಂಗಡಿಗಳನ್ನು ಕಟ್ಟಲಾಗಿದೆ ಎಂದರೆ ಸರಿ. ಅದರಲ್ಲಿ ಒಂದು ರಹವಾಸಿ ಮನೆ ಇರುತ್ತದೆಂದರೆ ಸರಿ. ಈ ಮನೆಯು ಆಸ್ತಿ ಸಂಖ್ಯೆ 2671/1 ಮತ್ತು 2672/ಬಿ ರ ಮೇಲೆ ಇರುತ್ತದೆಂದರೆ ಸರಿ. ಸಿಟಿಎಸ್ ನಂಃ2671/2 ರಲ್ಲಿ ನಿಮ್ಮ ತಮ್ಮನ ಮಕ್ಕಳು ವಾಸವಾಗಿರುತ್ತಾರೆಂದರೆ ಸರಿ. ಸಿಟಿಎಸ್ ನಂಃ2671/1, 2671/2 ಮತ್ತು 2672/ಬಿ ರಲ್ಲಿ ಏಕ ಕಟ್ಟಡ ಇರುತ್ತದೆಂದರೆ ಸರಿ. ಆದಕಾರಣ ಮೂರು ಆಸ್ತಿಗಳ ಮಾಲೀಕರು ಸಾಮಾನ್ಯ ಅಡ್ಡಾಡುವ ಹಕ್ಕನ್ನು ಹೊಂದಿರುತ್ತಾರೆಂದರೆ ಸರಿ. ಸಿಟಿಎಸ್ ನಂಃ2671/1 ರ ಚಕಬಂದಿ ಹೇಳಲು ಬರುವದಿಲ್ಲ. ಸದರಿ ಆಸ್ತಿಯಲ್ಲಿ ಕಟ್ಟಿರುವ ರಹವಾಸಿ ಮನೆಯಲ್ಲಿಯೇ ವಾಸವಾಗಿರುತ್ತೀರಿ ಎಂದರೆ ಸರಿ. ಸಿಟಿಎಸ್ ನಂಃ2671/1 ರಲ್ಲಿರುವ ನಾಲ್ಕು ವಾಣಿಜ್ಯ ಅಂಗಡಿಗಳನ್ನು ತಾವು ಬಾಡಿಗೆಗೆ ಕೊಟ್ಟಿರುತ್ತೀರಿ ಎಂದರೆ ಸರಿ. ಬಾಡಿಗೆ ಹಣವನ್ನು ಯಾರು ಪಡೆಯುತ್ತಾರೆಂದರೆ ಸಾಕ್ಷಿಯು ಮಹದೇವಪ್ಪ ಅಗಡಿ (3 ನೇ ಪ್ರತಿವಾದಿ) ಎಂಬುವವರು ಪಡೆಯುತ್ತಾರೆಂದು ನುಡಿಯುತ್ತಾರೆ. ಸದರಿ ಆಸ್ತಿ ಮೇಲೆ ಯಾವ ಬ್ಯಾಂಕನ ಬೋಜಾ ಇದೆ ಎಂದರೆ ಸಾಕ್ಷಿಯು ಬೈಲಹೊಂಗಲ ಬ್ಯಾಂಕನ ಬೋಜಾ ಇದ್ದು ಈಗ ಇರುವದಿಲ್ಲ ಎನ್ನುತ್ತಾರೆ. ವಿಜಯ ಬ್ಯಾಂಕನ ಸಾಲ ನನ್ನ ಹೆಸರಿನಲ್ಲಿರುವದಿಲ್ಲ.

7. 2011 ರಲ್ಲಿ ಸಿಟಿಎಸ್ ನಂಃ2671/1 ರ ಮೇಲೆ ಕರ್ನಾಟಕ ಬ್ಯಾಂಕನಲ್ಲಿ ಸಾಲ ಮಾಡಲಾಗಿತ್ತು. ಸದರಿ ಸಾಲವು ತೀರುವಳಿಯಾಗಿ ಮುಕ್ತಾಯಗೊಂಡಿರುತ್ತದೆ. ಕರ್ನಾಟಕ ಬ್ಯಾಂಕನಲ್ಲಿ 15 ಲಕ್ಷ ರೂ ಗಳ ಸಾಲ ಇತ್ತು. ಖರೀದಿ ಮೊತ್ತವನ್ನು ತಮಗೆ ಯಾವ ನಾತೇದಿಂದ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಹಣ ಕೊಟ್ಟಿರುವದಿಲ್ಲ ಬದಲಿಗೆ ನಾವೇ ಕೊಟ್ಟಿರುತ್ತೇವೆ ಎನ್ನುತ್ತಾರೆ. ನನ್ನ ಹೆಸರಿಗೆ 5 ಲಕ್ಷ ರೂ ಗಳ ಯಾವದೇ ಡಿ ಡಿ ಯನ್ನು ಕೊಟ್ಟಿರುವದಿಲ್ಲ. 3 ನೇ ಪ್ರತಿವಾದಿಯು ತಮ್ಮಿಂದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಡುತ್ತೇನೆಂದು ಹೇಳಿ ಯಾವದೇ ಹಣವನ್ನು ನೀಡದೇ ಖರೀದಿ ಪತ್ರವನ್ನು ಮಾಡಿಸಿಕೊಂಡಿರುತ್ತಾರೆಂದರೆ ಸರಿ. 3 ನೇ ಪ್ರತಿವಾದಿಯು ನನ್ನ ಹೆಸರಿಗೆ ಇಲ್ಲಿಯವರೆಗೂ

ಯಾವದೇ ಖರೀದಿ ಪತ್ರವನ್ನು ಮಾಡಿಕೊಟ್ಟಿರುವದಿಲ್ಲ. ವಾದಿಯು ಈ ಖರೀದಿ ಪತ್ರಕ್ಕೆ ಸಮ್ಮತಿ ಇರದ ಕಾರಣ ಸಹಿ ಮಾಡಿರುವದಿಲ್ಲ ಎಂದರೆ ಸಾಕ್ಷಿಯು ಸಹಿ ಮಾಡಿರುವದಿಲ್ಲ ಹಾಗೂ ಮಾಡಲು ಹೇಳಿದರೂ ಮಾಡಿಲ್ಲ ಎಂದು ನುಡಿಯುತ್ತಾರೆ. ಸಿಟಿಎಸ್ ನಂಃ2671/1 ರಲ್ಲಿ ತಮ್ಮ ಮಗನಿಗೆ ಕಾನೂನುಬದ್ದ ಹಕ್ಕು ಇರುತ್ತದೆಂದರೆ ಸರಿಯಲ್ಲ. ಈ ಪ್ರಸ್ತುತ ದಾವೆಯನ್ನು ತಮ್ಮ ಮಗ ಮೊದಲು ಸಲ್ಲಿಸಿರುತ್ತಾರೆಂದರೆ ಸರಿ. ಈ ಪ್ರಕರಣದಲ್ಲಿ ತಕರಾರನ್ನು ಹಾಕಿ ತಮಗೆ ಸಂಬಂದಪಟ್ಟ ಆಸ್ತಿಗಳ ಕುರಿತು ವಾದವನ್ನು ಮಂಡಿಸಬಹುದಾಗಿತ್ತು ಎಂದರೆ ಸರಿ. ಈ ದಾವೆಯಲ್ಲಿ ವಾದವನ್ನು ಮಂಡಿಸದೇ ತಾವು ಅಸಲು ದಾವಾ ಸಂಖ್ಯೆಃ299/2023 ನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ಸದರಿ ದಾವೆಯಲ್ಲಿ ತಾವು ತಮ್ಮ ಮಗನ ಮೇಲೆ ತಡೆಯಾಜ್ಞೆ ತಂದು ತೊಂದರೆ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸಿಟಿಎಸ್ ನಂಃ2671/1 ರಲ್ಲಿ ತಾವು ಕಬ್ಜಾ ಇರುತ್ತೀರಿ ಎಂದರೆ ಸರಿ. ತಾವು 3 ನೇ ಪ್ರತಿವಾದಿ ಮಾಡಿದ ಸಾಲಕ್ಕೆ ತಮ್ಮ ಬಾಡಿಗೆ ಹಣವನ್ನು ನೀಡುತ್ತಿದ್ದೀರಿ ಎಂದರೆ ಸರಿ. ವಾದಿಗೆ ಸಿಟಿಎಸ್ ನಂಃ2671/1 ರಲ್ಲಿ 1/3 ನೇ ಹಿಸ್ಸೇ ಇರುವ ಕಾರಣ ಹಾಗೂ ಅವರು ಯಾವದೇ ಖರೀದಿ ಪತ್ರ ಮಾಡಿಕೊಡದ ಕಾರಣ ಈ ದಾವೆಯನ್ನು ಹಾಕಿದ್ದು ಅವರಿಗೆ ಹಕ್ಕು ಇರುತ್ತದೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.